# ಒಡನಾಟ

● ನಿಮ್ಮ ಹುಟ್ಟೂರು ಹಾಗೂ ಬಾಲ್ಯದ ದಿನಗಳ ಕುರಿತು ತಿಳಿಸುವಿರಾ?

ನಾನು ಕಾರವಾರ ಸಮೀಪದ ಗೋವಾ ಗಡಿಯಲ್ಲಿರುವ ಮಾಜಾಳಿ ಎಂಬ ಊರಿನಲ್ಲಿ ಹುಟ್ಟಿದೆ. ಅದು ಬಹಳ ಸುಂದರವಾದ ಊರು. ಊರಿನ ಎರಡು ಕಡೆ ಗುಡ್ಡಗಳು, ಒಂದು ಕಡೆ ಅರಬ್ಬಿ ಸಮುದ್ರ ನಡುವೆ ಭತ್ತದ ಗದ್ದೆಗಳು, ಮರಗಿಡಗಳು, ಹೊಳೆಹಳ್ಳಗಳು, ಸದೃಢ ಮಾಜಿಸೈನಿಕರು ಮತ್ತು ಒಳ್ಳೆಯ ಕೃಷಿಕರಿಂದ ತುಂಬಿದ ಊರು. ಅದು ಕಾಡಿನ, ಹೊಲದ ದುಡಿಮೆಯ ಚೈತನ್ಯಭರಿತ ಬದುಕು. ಮಹಿಳೆಯರು ಕೂಡ ಕಷ್ಟಜೀವಿಗಳು. ಅವರು ಕಾಡಿಗೆ ಹೋಗಿ ಉರುವಲು ತರುವುದು, ಹೊಲದಲ್ಲಿ ಕೆಲಸ ಮಾಡುವುದು ಜೊತೆಗೆ ಗೃಹಕೃತ್ಯವನ್ನೂ ನಡೆಸುತ್ತಿದ್ದರು. ಮೊದಲ ಮತ್ತು ಎರಡನೇ ಮಹಾಯುದ್ಧಗಳಲ್ಲಿ ಭಾಗಿಯಾಗಿ ಬಂದ ಗಂಡಸರು ಯುದ್ಧದ ಕುರಿತಾದ ಘಟನೆಗಳನ್ನು ಹೇಳುತ್ತಿದ್ದರು. ಪ್ರಕೃತಿ ಮತ್ತು ಮನುಷ್ಯನ ಅಸ್ತಿತ್ವದ ಸಂಘರ್ಷ ನನ್ನ ಮೇಲೆ, ನನ್ನ ಬಾಲ್ಯದ ಮೇಲೆ ಪ್ರಭಾವ ಬೀರಿದ ಅಂಶಗಳು. ಆದರೆ ಬಾಲ್ಯದ ಅನುಭವ ನನಗೆ ಹೆಚ್ಚು ಕಾಲ ಲಭಿಸಲಿಲ್ಲ. 14ನೇ ವಯಸ್ಸಿನಲ್ಲಿ ನನ್ನ ತಂದೆ ದೂರ ಹೋಗಿದ್ದರಿಂದ, ಹೊಲದ ಸಮಸ್ತ ಜವಾಬ್ದಾರಿಯನ್ನು ನಾನೇ ನಿರ್ವಹಿಸಬೇಕಾಯಿತು. ಆಗ ನನ್ನ ಶಾಲಾ ಶಿಕ್ಷಣವೂ ನಿಂತು ಹೋಯಿತು. ಹದಿನಾಲ್ಕು, ಹದಿನೈದು, ಹದಿನಾರು ಈ ವಯಸ್ಸಿನಲ್ಲಿ ನಾನು ಹೊಲದ ಕೆಲಸದಲ್ಲಿ ನಿರತನಾಗಿದ್ದೆ. ಆಮೇಲೆ ಮನೆಯಿಂದ ಓಡಿ ಹೋಗಿ ನಾನು ಸೈನ್ಯದಲ್ಲಿ ಭರ್ತಿಯಾದೆ.

● ನಿಮ್ಮ ವೃತ್ತಿ ಬದುಕು ಬೇರೆ ಬೇರೆ ಕ್ಷೇತ್ರಗಳಲ್ಲಿ ಹಂಚಿ ಹೋಗಿದೆ. ಅದರ ಅನುಭವ ಹೇಗಿದೆ?

ನಾನು ಕೃಷಿಕನಾಗಿ ಕೆಲಸ ಮಾಡಿದೆ. ಇದರಿಂದ ಪ್ರಕೃತಿಯ ಕುರಿತು ಹೆಚ್ಚಿನ ತಿಳಿವಳಿಕೆ ಪಡೆದುಕೊಂಡೆ. ಪ್ರಕೃತಿಯಲ್ಲಿ ತೊಡಗಿಕೊಂಡದ್ದರಿಂದ ನನ್ನ ಹಾಗೂ ಪ್ರಕೃತಿಯ ನಡುವೆ ಒಂದು ಅಭೇದ ಸಂಬಂಧ ಏರ್ಪಟ್ಟಿತ್ತು. ಇದು ಮುಂದೆ ಸಾಹಿತ್ಯರಚನೆಯಲ್ಲಿ ತೊಡಗಿಸಿಕೊಂಡಾಗ ತುಂಬಾ ಉಪಯೋಗಕ್ಕೆ ಬಂತು. ಆನಂತರ ನಾನು ಮಿಲಿಟರಿ ಸೇರಿದೆ. ಸೈನ್ಯದಲ್ಲಿದ್ದಾಗ ನಾನು ಡಾರ್ಜಿಲಿಂಗ್ ಸಮೀಪ ಹಿಮಾಲಯ ಪ್ರದೇಶದಲ್ಲಿ, ರಾಜಸ್ತಾನದ ಮರುಭೂಮಿಯಲ್ಲಿ ನೆಲೆಸಿದ್ದೆ. ಒಂದು ವರ್ಷದ ಅವಧಿಗೆ ವಿಶ್ವಸಂಸ್ಥೆಯ ಸೈನ್ಯದಳದಲ್ಲಿ ಶಾಂತಿಸೈನಿಕನಾಗಿ ಈಜಿಪ್ಟ್, ಇಸ್ರೇಲ್ ಗಡಿಯಲ್ಲಿ ಸೇವೆ ಸಲ್ಲಿಸಿದೆ. 1965ರಲ್ಲಿ ನಡೆದ ಭಾರತ ಪಾಕಿಸ್ತಾನ ಯುದ್ಧದಲ್ಲಿ ಪಂಜಾಬ್ ಗಡಿಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದೇನೆ. ಆಗ ಆ ಯುದ್ಧದಲ್ಲಿ ನನ್ನ ಆಪ್ತ ಸ್ನೇಹಿತನೊಬ್ಬ ಆತ್ಮಬಲಿದಾನ ನೀಡಿದ್ದ. ಇದು ನನ್ನಲ್ಲಿ ಆತ್ಮವಿಶ್ವಾಸ ಬೆಳೆಯಲು ಹಾಗೂ ಆಳವಾದ ಅನುಭವ ಪಡೆಯಲು ಸಹಾಯಕವಾಗಿದೆ. ಸೈನ್ಯದಿಂದ ನಿವೃತ್ತಿ ಹೊಂದಿದ ಬಳಿಕ ನಾನು ಯಲ್ಲಾಪುರದ ಅರಣ್ಯ ಇಲಾಖೆಯ ಘಟಕವೊಂದರಲ್ಲಿ ಸ್ವಲ್ಪ ಸಮಯ ಕೆಲಸ ನಿರ್ವಹಿಸಿದೆ. ಆಗ ನನಗೆ ಕಾಡಿನ ಗಿಡಮರಗಳು, ಅರಣ್ಯದೊಳಗಿನ ಮನುಷ್ಯಜೀವನದ ಪರಿಚಯವಾಯಿತು. ಒಂದೂವರೆ ವರ್ಷ ತರಬೇತಿಗಾಗಿ ಪುಣೆಯಲ್ಲಿದ್ದಾಗ ಗ್ರಂಥಾಲಯದಲ್ಲಿ ಕುಳಿತು ಅಧ್ಯಯನ ನಡೆಸುತ್ತಿದ್ದೆ.

● ನಿಮ್ಮ ಸಾಹಿತ್ಯ ಬರವಣಿಗೆ ಪ್ರಾರಂಭ ಯಾವಾಗ ಮತ್ತು ಹೇಗೆ ನಡೆಯಿತು?

1965ರ ಯುದ್ಧದಲ್ಲಿ ಪ್ರಕೃತಿ ಮತ್ತು ಮಾನವ ಜೀವಹಾನಿ ಅಪಾರ ಪ್ರಮಾಣದಲ್ಲಿ ನಡೆದು ಹೋಗಿತ್ತು. ಮೂಲತಃ ನಾನು ಸಂವೇದನಾಶೀಲ ವ್ಯಕ್ತಿ. ಅದನ್ನು ನೋಡಿ ಅಸ್ತವ್ಯಸ್ತನಾದೆ. ನನ್ನ